ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 6, MAY-JUNE 2022, Pp. 86-89.
©*IIMRD*, Mysuru
IIMRD JOURNALS
www.iimrd.com

# ಹೈದ್ರಾಬಾದ್ ಕರ್ನಾಟಕದ ಕುರಿಗಾಹಿಗಳ ಋತುಮಾನದ ವಲಸೆ: ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ನಿಂಗಪ್ಪ* ಮತ್ತು ಡಾ ಪೂರ್ವಾಚಾರ್ ಎಂ****

*ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

**ಪ್ರಾಧ್ಯಾಪಕರು, ಸಮಾಜ ಶಾಸ್ತ್ರ ಅಧ್ಯಯನ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.

**ಸಾರಾಂಶ: (Abstract)**

*ಪ್ರಾಚೀನ ಕಾಲದಲ್ಲಿ ಮಾನವ ಒಂದೇ ಪ್ರದೇಶದಲ್ಲಿ ನೆಲೆನಿಲ್ಲದೇ ತನ್ನ ಬೇಕು ಬೇಡಗನ್ನು ಈಡೇರಿಸಿಕೊಳ್ಳಲು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಮಾರಿಯಾಗಿಯೇ ಅಥವಾ ಅರೆ ಅಲೆಮಾರಿಯಾಗಿ ಸಾಗಿ ನಾಗರಿಕತೆಗಳ ಉಗಮಕ್ಕೆ ಕಾರಣವಾಯಿತು ಎನ್ನಬಹುದು. ವಲಸೆಯು ಮುಖ್ಯವಾಗಿ ಮನುಷ್ಯನ ಬದುಕನ್ನು ಕಟ್ಟಿಕೊಳ್ಳಲು ಮತ್ತು ವಿವಿಧ ಉದ್ದೇಶಗಳನ್ನು ಹಾಗೂ ಬೆಳವಣಿಗೆಗಾಗಿ ವಲಸೆಯಾಗುವುದನ್ನು ಕಾಣುತ್ತೇವೆ ಮತು ವಲಸೆ ಪ್ರಾದೇಶಿಕ ವಿಭಿನ್ನ ವ್ಯತ್ಯಾಸಗಳನ್ನು ಒಳಗೊಂಡಿದೆ. ವಿವಿಧ ವೃತ್ತಿಯನ್ನು, ಬದುಕನ್ನು, ಸಾಹಿತ್ಯವನ್ನು ಪ್ರದೇಶವನ್ನು ಆಧಾರವಾಗಿಟ್ಟುಕೊಂಡು ವಲಸೆ ಪ್ರಾರಂಭವಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಹೈದ್ರಾಬಾದ್ ಕರ್ನಾಟಕದ ಕುರಿಗಾಹಿಗಳ ಋತುಮಾನದ ವಲಸೆ ಬಗ್ಗೆ ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಕುರಿಗಾಹಿ. ಋತುಮಾನ ವಲಸೆ. ಮಾರುಕಟ್ಟೆ ಮೌಲ್ಯ. ಹೈದ್ರಾಬಾದ್ ಕರ್ನಾಟಕ

## ಪೀಠಿಕೆ

ಬಲ್ಲವನು ಬಲ್ಲ ಬೆಲ್ಲದಸವಿ ಎನ್ನುವ ಅನುಭವವಾಣಿಯಂತೆ ಕುರಿಗಾಹಿಯೊಬ್ಬನ ಪರಿಸ್ಥಿತಿಯನ್ನು ಅದೇ ಸಮುದಾಯದ ಅಥವ ಅದೇ ಕುಟುಂಬದ ವ್ಯಕ್ತಿ ಅರ್ಥಮಾಡಿಕೊಳ್ಳುವಷ್ಟು ಇತರರು ಅರ್ಥಮಾಡಿಕೊಳ್ಳಲಾರರು. ಬದುಕಿನ ಬವಣೆಯನ್ನು ನೀಗಿಸಲು ಪ್ರತಿಯೊಬ್ಬ ತನ್ನದೇಯಾದ ವೃತ್ತಿಯನ್ನು ಅನುಸರಿಸಿಕೊಂಡು ಬರುತ್ತಾನೆ. ನಿಸರ್ಗ ಕಾಡು, ಮೇಡು, ಬೆಟ್ಟ–ಗುಡ್ಡ ,ನದಿ, ಝರಿ ತೊರೆ ಇತ್ಯಾದಿಗಳನ್ನು ಅವಲಂಬಿಸಿಕೊಂಡು ಕುರಿಗಾಹಿಯು ತನ್ನ ಆಸ್ತಿ ಮತ್ತು ತನ್ನ ಕುಟುಂಬದ ಆದಾಯವೆಂದು ನಂಬಿ ಜೀವನವಿಡೀ ಸವೆಸುವುದನ್ನು ಕಾಣುತ್ತೇವೆ, ನೈಸರ್ಗಿಕ ವಿಕೋಪಗಳಾದ ಅತಿವೃಷ್ಟಿ, ಅನಾವೃಷ್ಟಿ, ನೆರೆಹಾವಳಿ ಸಾಂಕ್ರಾಮಿಕ ರೋಗಗಳು ಮಾರುಕಟ್ಟೆ ಮೌಲ್ಯಗಳು ನಿಂದನೆಗಳಿಂದ ಶೋಷಣೆಗೆ ಒಳಗಾಗಿ ನಿತ್ಯವು ಸಹ ಕುರಿಗಾಹಿ ಸಂಕಷ್ಟಗಳನ್ನು ಎದುರಿಸುತ್ತಿದ್ದಾನೆ.

*Please cite this article as: ನಿಂಗಪ್ಪ ಮತ್ತು ಪೂರ್ವಾಚಾರ್ ಎಂ.* (2022). ಹೈದ್ರಾಬಾದ್ ಕರ್ನಾಟಕದ ಕುರಿಗಾಹಿಗಳ ಋತುಮಾನದ ವಲಸೆ: ಒಂದು ಸಮಾಜಶಾಸ್ತ್ರೀಯ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ. 86–89.*

ಗಸ್ಟೊವ್‌ಒಪರ್ಟರವರು ಹೇಳುವಂತೆ ಕುರುಬರು ಭಾರತದಲ್ಲಿ ನೆಲೆಸಿದ ತೀರ ಮೂಲ ನಿವಾಸಿಗಳಾಗಿದ್ದು ದ್ರಾವಿಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇಲಿಯಟ್ ರವರು ಕುರುಬರು ಭಾರತದ ಪೂರ್ವ ಜನಾಂಗದಲ್ಲಿ ಒರ್ವ ಜನಾಂಗದವರಾಗಿದ್ದಾರೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

**ಅಧ್ಯಯನದ ಉದ್ದೇಶಗಳು**

- ಕುರಿಗಾಹಿಯ ಕುಲಕಸುಬಲ್ಲಿನ ಸ್ಥಿತ್ಯಾಂತರ ಕುರಿತು ಅಧ್ಯಯನ
- ವಿವಿಧ ಋತುಮಾನಗಳಲ್ಲಿ ಕುರಿ ಮತ್ತು ಕುರಿಗಾಹಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಬೆಳಕು ಚೆಲ್ಲುವುದು
- ಕುರಿ ಸಾಕಾಣಿಕೆಗೆ ವೈಜ್ಞಾನಿಕ ಹಾಗೂ ಆಧುನಿಕ ಪದ್ಧತಿಯನ್ನು ಪರಿಚಯಿಸುವುದು

**ಅಧ್ಯಯನದಮಹತ್ವ**

- ಕುರಿ ಸಾಕಾಣಿಕೆ ವೃತ್ತಿಯಲ್ಲಿ ತೊಡಗಿರುವವರ ಸಮಸ್ಯೆಗಳನ್ನು ತಿಳಿದುಕೊಳ್ಳಬಹುದು.
- ಕುರಿ ಸಾಕಾಣಿಕೆಗೆ ಸುಧಾರಿತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸಹಾಯಕವಾಗುತ್ತದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಹೈದ್ರಾಬಾದ್ ಕರ್ನಾಟಕವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಭಾಗದಲ್ಲಿರುವ ಆರು ಜಿಲ್ಲೆಗಳಿಂದ 25 ಕುರಿಗಾಹಿಗಳನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

**ಮಾದರಿ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಸರಳ ಯಾದೃಚ್ಛಿಕ ಮಾದರಿಯಲ್ಲಿ 25 ಕುರಿಗಾಹಿಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

**ಸಂಶೋಧನಾ ತಂತ್ರಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮಾಹಿತಿಯನ್ನು ಸಹಭಾಗಿ ಅವಲೋಕನ ವಿಧಾನ, ಸಂದರ್ಶನ, ಗುಂಪು ಚರ್ಚೆ, ಕ್ಷೇತ್ರಕಾರ್ಯ ವಿಧಾನಗಳ ಮೂಲಕ ಸಂಗ್ರಹಿಸಿಕೊಳ್ಳಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಲೇಖನಗಳು, ದಿನಪತ್ರಿಕೆಗಳು, ಕನ್ನಡ ವಿಶ್ವಕೋಶ, ಕರ್ನಾಟಕ ರಾಜ್ಯದ ಗೆಜಿಟಿಯರ್, ಅಂತರ್ಜಾಲ, ಸಂಶೋಧನಾ ಗ್ರಂಥಗಳು ಮತ್ತು ಸಂಶೋಧನಾ ಕ್ಷೇತ್ರದ ಪ್ರತಿವರ್ತಿಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಸಮಾಜಶಾಸ್ತ್ರದ ಚೌಕಟ್ಟಿನಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಕೋಷ್ಟಕ 1: ವಲಸೆ ಹೋಗುವ ಕುರಿಗಾಹಿಗಳ ವಿವರ:**

| **ವಲಸೆ ಹೋಗುವ ಋತುಗಳು** | **ಆವೃತ್ತಿ** | **ಶೇಕಡವಾರು** |
|---|---|---|
| ಮಳೆಗಾಲ | 05 | 20.0 |
| ಚಳಿಗಾಲ | 05 | 20.0 |
| ಬೇಸಿಗೆಕಾಲ | 15 | 60.0 |
| **ಒಟ್ಟು** | **25** | **100.0** |

**ಮೂಲ: ಪ್ರಾಥಮಿಕ ಮೂಲ**

ಕೋಷ್ಟಕ ಒಂದರಲ್ಲಿ ಋತುಮಾನಕ್ಕನುಗುಣವಾಗಿ ವಲಸೆ ಹೋಗುವ ಕುರಿಗಾಹಿಗಳ ವಿವರವನ್ನು ನೀಡಲಾಗಿದೆ. ಒಟ್ಟು ಪ್ರತಿಕ್ರಿಯಾರ್ಥಿಗಳಲ್ಲಿ ಶೇ. 20 ರಷ್ಟು ಮಳೆಗಾಲದಲ್ಲಿಯೂ ಮತ್ತು ಅಷ್ಟೆ ಪ್ರಮಾಣದ ಕುರಿಗಾಹಿಗಳು ಚಳಿಗಾಲದಲ್ಲಿಯೂ, ಮತ್ತು ಶೇ.60ರಷ್ಟು ಕುರಿಗಾಹಿಗಳು ಬೇಸಿಗೆಯಲ್ಲಿ ವಲಸೆ ಹೋಗುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬೇಸಿಗೆಯಲ್ಲಿ ಉಳುಮೆ ಮಾಡದ ಹೊಲಗಳಲ್ಲಿ ಪೈರನ್ನು ಕಟಾವು ಮಾಡಿದ ನಂತರ ಹುಲ್ಲು ಮತ್ತು ಮೇವು ಆಧಿಕವಾಗಿ ದೊರೆಯುವುದರಿಂದ ಕುಟುಂಬ ಸಮೇತ ಕುರಿಗಳೊಂದಿಗೆ ವಲಸೆ ಹೋಗಲು ಹೋಗುತ್ತಾರೆ. ಮಳೆಗಾಲದಲ್ಲಿ ಅತಿವೃಷ್ಟಿ ಅನಾವೃಷ್ಟಿಯಿಂದ ನೈಸರ್ಗಿಕ ವಿಕೋಪಗಳು ಸಂಭವಿಸುವುದರಿಂದ ಕುಟುಂಬವನ್ನು ತಮ್ಮ ಮೂಲ ಗ್ರಾಮಗಳಲ್ಲಿ ಬಿಟ್ಟು ಮೂಲ ಗ್ರಾಮದಿಂದ ಸುಮಾರು 30 ರಿಂದ 50 ಕಿ ಮೀ. ಒಳಗೆ ವಾಸಿಸುವ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ ಮತ್ತು 20% ಕುರಿಗಾಹಿಗಳು ಚಳಿಗಾಲದಲ್ಲಿ ವಲಸೆಯ ಬಗ್ಗೆ ಆಸಕ್ತಿ ಹೊಂದಿದ್ದಾರೆ ಏಕೆಂದರೆ ಚಳಿಗಾಲದಲ್ಲಿ ಕುರಿಗಳಿಗೆ ಆರೋಗ್ಯಕ್ಕೆ ಸಂಬಂಧಿಸಿದ ಮತ್ತು ನೀರಿನಿಂದ ಕಾಯಿಲೆಗಳಿಗೆ ತುತ್ತಾಗಿ ಮರಣ ಹೊಂದುತ್ತಿವೆ ಮತ್ತು ಸಾಂಕ್ರಾಮಿಕ ಕಾಯಿಲೆಗಳೂ ಬರುವುದರಿಂದ ಅರೆ ನಗರ ಮತ್ತು ನಗರಭಾಗದಿಂದ 20 ಕಿ.ಮೀ ಅಂತರ ದೂರದಲ್ಲಿ ಹಟ್ಟಿ ಹಾಕಿಕೊಂಡು ಇರುವ ಮನಸ್ಥಿತಿ ಹೊಂದಿದ್ದಾರೆ.

**ಅಧ್ಯಯನದಿಂದ ವ್ಯಕ್ತವಾದ ಅಂಶಗಳು**

- ಕುರಿಗಳಿಗೆ ಸಾಂಕ್ರಾಮಿಕ ಕಾಯಿಲೆ ಬಿದ್ದಾಗ ಸರಿಯಾಗಿ ವೈದ್ಯಕೀಯ ಸೌಲಭ್ಯಗಳು ದೊರಕುವುದಿಲ್ಲ.
- ಸಾಂಕ್ರಾಮಿಕ ಕಾಯಿಲೆ ಹಾಗೂ ನೈಸರ್ಗಿಕ ವಿಕೋಪದಿಂದ ಸಾವನ್ನಪ್ಪಿದ ಕುರಿಗಳಿಗೆ ಸರ್ಕಾರದಿಂದ ಪರಿಹಾರ ಸಿಗುವುದಿಲ್ಲ.
- ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗದೆ ಗಳಿಸಿದ ಲಾಭವು ಮಧ್ಯವರ್ತಿಗಳ ಪಾಲಾಗುತ್ತಿದೆ.
- ಸರ್ಕಾರದಿಂದ ಕುರಿಗಾಹಿಗಳಿಗೆ ಮತ್ತು ಕುರಿಗಳಿಗೆ ಗುಂಪು ವಿಮೆ ಸೌಲಭ್ಯ ಕಲ್ಪಿಸಬೇಕು ಎಂಬ ಬೇಡಿಕೆ ಕಂಡು ಬರುತ್ತದೆ.

**ಸಲಹೆಗಳು**

ಪ್ರಸ್ತುತ ಅಧ್ಯಯನದ ಆಧಾರದ ಮೇಲೆ ಕುರಿಗಾಹಿಗಳ ಅಭಿವೃದ್ಧಿಗೆ ಕೆಲವು ಸಲಹೆಗಳನ್ನು ನೀಡಲಾಗಿದೆ.

- ಕುರಿಗಾಹಿಗಳು ವಲಸೆ ಹೋಗುವುದನ್ನು ತಪ್ಪಿಸಲು ಸರ್ಕಾರವು ಗೋಮಾಳಗಳನ್ನು ಮೀಸಲಿಡಬೇಕು.
- ಪಶು ಸಂಗೋಪನಾ ಇಲಾಖೆ ವತಿಯಿಂದ ಕುರಿಸಾಕಾಣಿಕೆಗೆ ಅನುಕೂಲವಾಗುವಂತೆ ವೈಜ್ಞಾನಿಕ ತರಬೇತಿ ನೀಡುವುದು.
- ಪಶುಚಿಕಿತ್ಸೆಗಾಗಿ ಸಂಚಾರಿ ಆರೋಗ್ಯ ವಾಹನಗಳ ಸೌಲಭ್ಯವನ್ನು ಒದಗಿಸುವುದು.
- ಕುರಿ ಸಾಕಾಣಿಕೆದಾರರಿಗೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು.
- ಕುರಿ ಮಾರಾಟಕ್ಕೆ ಆಧುನಿಕ ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸುವುದು.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಕುರಿಗಾಹಿಗಳು ಶ್ರಮವಹಿಸಿ ಕುರಿ ಸಾಕಿದರೂ ಕೂಡ ಅತಿಯಾದ ಲಾಭವಿಲ್ಲ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಿ ನೆಲೆಸುವುದ್ದರಿಂದ ಅವರು ವಾತಾವರಣದ ವೈಪರಿತ್ಯದಿಂದ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ವಲಸೆಯ ಸಂದರ್ಭದಲ್ಲಿ ಆಕಸ್ಮಿಕವಾಗಿ ಕುರಿಗಳು ಸಾವನ್ನಪ್ಪಿದ್ದರೆ ಯಾವುದೇ ಪರಿಹಾರ ಸಿಗುವುದಿಲ್ಲ. ಹಾಗಾಗಿ ಕುರಿಗಾಹಿಗಳ ಅಭಿವೃದ್ಧಿಗೆ ಸರ್ಕಾರ ಯೋಜನೆಗಳನ್ನು ರೂಪಿಸಬೇಕಿದೆ.

**ಪರಾಮರ್ಶನ ಗ್ರಂಥಗಳು:**


- ದೇಸಾಯಿ. ಎಸ್ ಜಿ. (1996). ಕ್ರಿಯಾತ್ಮಕ ಸಂಶೋಧನೆ. ವಿದ್ಯಾನಿಧಿ ಪ್ರಕಾಶನ, ಗದಗ.
- ಶಿವಾನಂದ ಗುಬ್ಬಣ್ಣವರ (1993). ಕರ್ನಾಟಕದ ಕುರುಬರು. ಅಕ್ಷಯ ಪ್ರಕಾಶನ, ಧಾರವಾಡ.
- ಆತಂಕದಲ್ಲಿ ಕುರಿಗಾಹಿಗಳ ವಲಸೆ. (18/03/2020). ಪ್ರಜಾವಾಣಿ ದಿನಪತ್ರಿಕೆ, ಬೆಂಗಳೂರು.
- ಕೊಸಾಂಬಿ ಡಿ. ಡಿ. (2013). "ಪುರಾಣ ಮತ್ತು ವಾಸ್ತವ". ಚಿಂತನ ಪ್ರಕಾಶನ, ಬೆಂಗಳೂರು.
- ಕೃಷ್ಣಮೂರ್ತಿ ಕೆ. ವಿ. (2010). ಮಾನವ ಶಾಸ್ತ್ರ. ವಿಶ್ವಶ್ರೀ ಪ್ರಕಾಶನ, ತುಮಕೂರು.